**ಓ ಎಸ್ ನಂಃ 455/2014**

**ಪಿ. ಡಬ್ಲ್ಯೂ ಃ 4**

**ದಿಃ 08.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಜಿ ಪಿ ವಕೀಲರಿಂದ ಃ**

ನಾನು 1 ನೆ ಪ್ರತಿವಾದಿಯ ತಮ್ಮನ ಮಗಳಿರುತ್ತೇನೆ. ನಮ್ಮ ತಂದೆಯ ಹೆಸರು ಹನುಮೇಗೌಡ ಇರುತ್ತದೆ. ನಮ್ಮ ತಂದೆ ಈ ಕೇಸ್ ನಲ್ಲಿ 7 ನೆ ಪ್ರತಿವಾದಿ ಎಂದರೆ ಸರಿ. 1 ನೆ ಪ್ರತಿವಾದಿ ನನ್ನ ದೊಡ್ಡಪ್ಪ ಆಗಬೇಕೆಂದರೆ ಸರಿ. 12 ನೆ ಪ್ರತಿವಾದಿ ನನ್ನ ಚಿಕ್ಕಪ್ಪ ಎಂದರೆ ಸರಿ. ನನ್ನ ತಂದೆ ಈ ಕೇಸ್ ನಲ್ಲಿ ಸಾಕ್ಷಿ ಹೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ನನ್ನ ತಂದೆಯ ಮದ್ಯೆ ಬಾಂಧವ್ಯ ಚೆನ್ನಾಗಿದೆ. 2012 ರಿಂದ ಈ ಕೇಸ್ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಈ ಕೇಸ್ ನ ಬಗ್ಗೆ ನಮ್ಮ ತಂದೆಯ ಬಳಿ ನಾವು ವಿಚಾರ ಮಾಡಿಲ್ಲ.

ನನಗೆ ಒಬ್ಬ ತಂಗಿ ಯಶೋಧಾ ಮತ್ತು ನನ್ನ ತಮ್ಮ ವೆಂಕಟೇಶ್ ಇರುತ್ತಾರೆ. ನನ್ನ ಹೆಸರು ತಿಮ್ಮಾಜಮ್ಮ ಎಂದರೆ ಸರಿಯಲ್ಲ. ತಿಮ್ಮರಾಜಮ್ಮ ಅಲಿಯಾಸ್ ರಾಜಮ್ಮ ಇರುತ್ತದೆ. ನನಗೆ ಈ ಕೇಸ್ ನಲ್ಲಿ ನೋಟೀಸ್ ಬಂದಿಲ್ಲ ಮತ್ತು ಲಾಯರ್ ಮುಖಾಂತರ ಹಾಜರಾಗಿಲ್ಲ. ದಿನಾಂಕಃ 22.05.2012 ರಲ್ಲಿಯೇ ನನಗೆ ಸಮನ್ಸ ಜಾರಿಯಾಗಿತ್ತು. ನಾನು ಹಾಜರಾಗಿಲ್ಲ ಎಂದರೆ ಸರಿಯಲ್ಲ. ಈರಮ್ಮ, ಚೌಡಮ್ಮ ಮತ್ತು ಲಕ್ಷ್ಮಮ್ಮ ಇವರು ನನ್ನ ಸೋದರತ್ತೆಯಾಗಬೇಕು. ನಾನು ಹನುಮೇಗೌಡರ ಮಗಳಲ್ಲದೆ 1 ನೆ ವಾದಿಯ ಸೊಸೆ ಎಂದರೆ ಸರಿ. ನನಗೆ ಕೇಸ್ ಹಾಕಿರುವುದು ಮೊದಲಿನಿಂದಲೂ ಗೊತ್ತು ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಏಕೆಂದರೆ ನನಗೆ ಇಂಗ್ಲೀಷ್ ಓದಲು ಬರುವುದಿಲ್ಲ. ನಮ್ಮ ಲಾಯರ್ ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ವಾದಿಗಳು ಜಮೀನಿನಲ್ಲಿ ಭಾಗ ಬರಬೇಕೆಂದು ಕೇಸ್ ಹಾಕಿದ್ದರು. ನನ್ನ ಮುಖ್ಯ ವಿಚಾರಣೆಯ ವಿಷಯವನ್ನು ನಾನು ಹೇಳಿ ಬರೆಸಿಲ್ಲ. ಹನುಮೇಗೌಡ ಮತ್ತು ಮೂಡಲಗಿರಿಯಪ್ಪ ಇವರು ಈ ಕೇಸ್ ನಲ್ಲಿ ಏನು ಸಾಕ್ಷಿ ಹೇಳಿದ್ದರಿಂದ ನಾನು ತಿಳಿದುಕೊಂಡಿಲ್ಲ. ಈ ಕೇಸ್ ನಲ್ಲಿ ವಾದಿಗಳ ಪರವಾಗಿ ಯಾರು ಸಾಕ್ಷಿ ಹೇಳಿದ್ದಾರೆಂದು ಗೊತ್ತಿಲ್ಲ.

ರಾಮನಗರ ಕೋರ್ಟ್ ನಲ್ಲಿ ನಡೆದಿದ್ದ ಓ ಎಸ್ 85/2005 ರ ಬಗ್ಗೆ ನನಗೆ ಗೊತ್ತಿಲ್ಲ. ಯಾವ್ಯಾವ ಸ್ವತ್ತುಗಳ ಬಗ್ಗೆ ಕೇಸ್ ನಡೆದಿದೆ ಎಂದು ನನಗೆ ಗೊತ್ತಿಲ್ಲ. ವಾದಿಗಳು ಯಾವ್ಯಾವ ಸ್ವತ್ತುಗಳಿಗೆ ಮತ್ತು ಎಷ್ಟು ವಿಸ್ತೀರ್ಣ ಮತ್ತು ಚೆಕ್ ಬಂದಿಗಳಿಗೆ ಕೇಸ್ ಹಾಕಿದ್ದಾರೆಂದು ಗೊತ್ತಿಲ್ಲ. ವಾದಿಗಳು ರಾಮನಗರದಲ್ಲಿ ಕೇಸ್ ಹಾಕಿದ್ದು ಮತ್ತು ಈ ಕೇಸ್ ನಲ್ಲಿ ಭಾಗ ಕೊಡಲು ಕೇಳಿದ್ದರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಈರಮ್ಮ ಇವರಿಗೆ ಮಕ್ಕಳಿರಲಿಲ್ಲ ಎಂದರೆ ಸರಿ. ಈರಮ್ಮ ಇವರ ಕಾನೂನುಬದ್ದ ವಾರಸುದಾರರು ನಾನು ಅಲ್ಲ ಎಂದರೆ ಸರಿಯಲ್ಲ. ಅವರು ನಮ್ಮ ಮನೆಯಲ್ಲಿಯೇ ಇದ್ದರು ಎಂದು ಸಾಕ್ಷಿ ಹೇಳುತ್ತಾರೆ. ಈರಮ್ಮ ಇವರ ನಮ್ಮ ಜೊತೆಯಲ್ಲಿದ್ದ ಸಂದರ್ಭದಲ್ಲಿ ಒಂದು ಕಬ್ಬಿಣದ ಪೆಟ್ಟಿಗೆಯಲ್ಲಿ ಒಂದು ವಿಲ್ ಪೇಪರ್ ಇಟ್ಟಿದ್ದರು, ಅದನ್ನು ತೆಗೆದುಕೊಂಡು ಬಂದು ನಮ್ಮ ಲಾಯರ್ ಬಳಿಗೆ ಬಂದು ಕೇಳಿದ್ದೇವು ಎಂದು ಸಾಕ್ಷಿ ಹೇಳುತ್ತಾರೆ. ಅದನ್ನು ಮಾಡಿಸುವ ಸಂದರ್ಭದಲ್ಲಿ ನಾನು ಅಥವಾ ನನ್ನ ಗಂಡ ಇರಲಿಲ್ಲ.

ತುಮಕೂರು ತಾ. ಗೂಳೂರು ಹೋಬಳಿ, ಕೈದಾಳದಲ್ಲಿ ವಾಸವಾಗಿರುತ್ತೇನೆ. ಈರಮ್ಮ ನನ್ನ ಮದುವೆಯಾದಾಗಿನಿಂದ ನಮ್ಮ ಮನೆಯಲ್ಲಿಯೇ ಇದ್ದರು. ವಿಲ್ ಬರೆಸುವ ಸಂದರ್ಭದಲ್ಲಿ ಅವರು ನನಗೆ ಹೇಳಿ ಹೋಗಿರಲಿಲ್ಲ. ಈರಮ್ಮ ಇವರಿಗೆ ಸಾಯುವ ಮೊದಲು ಕಾಯಿಲೆ ಇತ್ತು ಎಂದರೆ ಸರಿಯಲ್ಲ. ಅವರಿಗೆ ಯಾವುದೆ ಆರೋಗ್ಯ ಸಮಸ್ಯೆ ಇರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.ಈರಮ್ಮ ಇವರು ಹೃದಯಾಘಾತವಾಗಿ ತೀರಿಕೊಂಡಿದ್ದಾರೆ. ಆಸ್ಪತ್ರೆಗೆ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಮಾರ್ಗ ಮಧ್ಯದಲ್ಲಿ ತೀರಿಕೊಂಡಿದ್ದಾರೆ. ದಿನಾಂಕ : 24.06.2023 ರಲ್ಲಿ ಈರಮ್ಮ ತೀರಿಕೊಂಡಿದ್ದಾರೆ. ಮರುದಿನ ಅಂದರೆ 25 ರ ತಾರೀಖಿನಂದು ಬೆಳಗಿನ ಜಾವ ಮಣ್ಣು ಮಾಡಿದ್ದೇವೆ. ಈರಮ್ಮ ತೀರಿಕೊಂಡ 5 ದಿನಗಳ ನಂತರ ಮನೆಯನ್ನು ಸ್ವಚ್ಚ ಮಾಡುವಾಗ ಪೆಟ್ಟಿಗೆಯಲ್ಲಿ ವಿಲ್ ಸಿಕ್ಕಿತು. 30 ನೇ ತಾರೀಖಿನಂದು ಮನೆ ಸ್ವಚ್ಛ ಮಾಡಿರುತ್ತೇವೆ. ಈರಮ್ಮನಿಗೆ ಹೃದಯಾಘಾತವಾಗಿತ್ತು , ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ತೀರಿಕೊಂಡಿದ್ದಾರೆ ಮತ್ತು 5 ದಿನಗಳ ನಂತರ ಮನೆ ಸ್ವಚ್ಛ ಮಾಡುವಾಗ ವಿಲ್ ಸಿಕ್ಕಿತ್ತು ಎಂದು ಪ್ರಮಾಣಪತ್ರದಲ್ಲಿ ಬರೆಸಿಲ್ಲ. ನಾವು ನೆಲಮಂಗಲದ ನಾರಾಯಣಗೌಡ ಎಂಬ ಲಾಯರ್ ನ್ನು ವಿಲ್ ತೆಗೆದುಕೊಂಡು ಹೋಗಿ ಭೇಟಿ ಮಾಡಿದೆವು. ಅವರು ತೀರಿಹೋದ 15 ದಿನಗಳ ನಂತರ ಲಾಯರ್ ನ್ನು ಭೇಟಿ ಮಾಡಿದ್ದೇವೆ. ನಾರಾಯಣಗೌಡ ಲಾಯರ್ ಇವರು ನಮ್ಮ ಪರವಾಗಿ ಕೋರ್ಟ್ ಗೆ ಅರ್ಜಿ ಸಲ್ಲಿಸಿದ್ದಾರೆ.

ನಾವು ಹಿರಿಯಣ್ಣ ವಕೀಲರನ್ನು ಭೇಟಿ ಆಗಿ ವಿಲ್ ಬಗ್ಗೆ ಚರ್ಚಿಸಿಲ್ಲ. ವಿಲ್ ನ್ನು ಯಾರು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಯಾರು ಮಾಡಿಸಿದ್ದಾರೆ ಮತ್ತು ಎಲ್ಲಿ ಮಾಡಿಸಿದ್ದಾರೆಂದು ಗೊತ್ತಿಲ್ಲ. ಇದುವರೆವಿಗೆ ಅದರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ. ವಿಲ್ ನಲ್ಲಿ ಪ್ರತಿ ಪುಟದಲ್ಲಿಯೂ ಹೆಬ್ಬೆಟ್ಟಿನ ರುಜುವನ್ನು ಎರಡೆರಡು ಬಾರಿ ಹಾಕಿದಂತೆ ಕಾಣುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಪತ್ರದಲ್ಲಿ ಇರುವ ಈರಮ್ಮನ ಹೆಬ್ಬೆಟ್ಟಿನ ಗುರುತಿಗೂ ಮತ್ತು ವಿಲ್ ನಲ್ಲಿರುವ ಹೆಬ್ಬೆಟ್ಟಿನ ಗುರುತಿಗೂ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ಈರಮ್ಮ ನಮ್ಮ ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ, ಅವರು ನಮಗೆ ಯಾವುದೆ ವಿಲ್ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ವಿಲ್ ನಲ್ಲಿ ಇರುವ ಹೆಬ್ಬೆಟ್ಟಿನ ಗುರುತುಗಳು ಈರಮ್ಮ ಇವರದ್ದಲ್ಲ ಎಂದರೆ ಸರಿಯಲ್ಲ.  ಈರಮ್ಮ ಇವರಿಗೆ ಖಾಯಿಲೆ ಇತ್ತು ಎಂದರೆ ಸರಿಯಲ್ಲ. ವಿಲ್ ನಲ್ಲಿ ಬರೆದುಕೊಟ್ಟವರು ಯಾರುಎಂದು ಗೊತ್ತಾಗಬಾರದು ಎಂದು ಎರಡೆರಡು ಬಾರಿ ಹೆಬ್ಬೆಟ್ಟಿನ ರುಜು ಹಾಕಿಸಿದ್ದೇವೆ ಎಂದರೆ ಸರಿಯಲ್ಲ. ಸೃಷ್ಟಿಸಿದ ವಿಲ್ ಗೆ ನಾನು ನನ್ನ ತಮ್ಮ ಮತ್ತು ಅವರ ಸ್ನೇಹಿತರ ಸಹಿ ಮಾಡಿಸಿದ್ದೇನೆ ಎಂದರೆ ಸರಿಯಲ್ಲ.  ನಾನು ಮತ್ತು ಸಾಕ್ಷಿದಾರರು ಸೇರಿಕೊಂಡು ವಿಲ್ ನ್ನು ಸೃಷ್ಟಿಸಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೆ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**